
# ಸೌಳಿಗಳ ಜಗತ್ತು!





■ ಚಿತ್ರ ಲೇಖನ :
**ನಾಗರಾಜ ವೈದ್ಯ**

ದಿಬ್ಬಣದ ಮೆರವಣಿಗೆಯಂತೆ ಕಾಣುವ ಇರುವೆ ಸಾಲು ಚಲನಶೀಲತೆಗೊಂದು ಮಾದರಿ. ನಸುಕಿನ ಎಳೆ ಬೆಳಕಿನೊಂದಿಗೆ ಶುರುವಾಗುವ ಈ ಪುಟ್ಟ ವಿಶ್ವದ ಪಾದಯಾತ್ರೆ ಬಿಸಿಲೇರುವ ತನಕವೂ ಜೋರಾಗಿಯೇ ನಡೆಯುತ್ತದೆ. ಅಷ್ಟೊತ್ತಿನ ಒಳಗೆ ಸಂಜೆಯವರೆಗಿನ ಊಟ, ತಿಂಡಿ ಇತ್ಯಾದಿಗಳ ಸಂಗ್ರಹವಾಗಬೇಕು. ಹಾಗಾಗಿ ತುಸು ಜೋರಾಗೇ ಹೆಜ್ಜೆ ಎತ್ತಿಡುವುದು, ಸಿಕ್ಕಿದ ತಿಂಡಿಗೆ ಮುತ್ತಿಕೊಳ್ಳುವುದು ನಡೆದೇ ಇರುತ್ತದೆ. ಹಗ್ಗದ ಮೇಲೆ, ಒಣಗಿಸಿಟ್ಟ  ಸೀರೆಯ ಮೇಲೆ, ಪೈಪಿನ ಒಳಗೆ – ಹೊರಗೆ.. ಹೀಗೆ ಎಲ್ಲೆಂದರಲ್ಲಿ ನಡೆದಾಡುವ ಇವರ ಬಿಂಕವನ್ನು ನೋಡುವುದೇ ಮೋಜು. ಎಳೆ ಕಿರಣಗಳಿಗೆ ಹೊಳೆಯುವ ಈ ಪಾರದರ್ಶಕ ಇರುವೆಗಳನ್ನು ಕ್ಯಾಮೆರಾ ಕಣ್ಣಲ್ಲಿ ಸೆರೆಹಿಡಿಯಲು ಮತ್ತಷ್ಟು ಉಮೇದು. ಬೆಳಕನ್ನು ಕುಡಿದ ಇರುವೆಗಳಿವು!

ನಾಡಿನ ವಿವಿಧೆಡೆ ಈ ಇರುವೆಗಳಿಗೆ ಸೌಳಿ, ಚಿಗಳಿ, ಚೌಳಿ ಇತ್ಯಾದಿ ಹೆಸರಿನಿಂದ ಕರೆಯುತ್ತಾರೆ. ಸ್ವರೂಪತಃ ಕೆಂಪು ಮೈಯವರು. ಇದೇ ಕಾರಣಕ್ಕೆ ಕೆಂಪಿರುವೆ ಎಂದೂ ಕರೆಯುತ್ತಾರೆ. ಎಲೆಯಿಂದ ಗೂಡು ಕಟ್ಟಿ ಇವರ ಸಂಸಾರ. ಜೇನಿನ ಸಂತತಿಯಲ್ಲಿ ಇರುವಂತೆ ಇಲ್ಲೂ ರಾಣಿಯದ್ದೇ ದರ್ಬಾರು. ಮೊಟ್ಟೆ, ಮರಿ ಮಾಡಿ ಕೈಬಿಟ್ಟರೆ, ಇನ್ನುಳಿದೆಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವುದು ಕೆಲಸಗಾರ ಇರುವೆಗಳ ಕರ್ತವ್ಯ. ಆಹಾರವೂ ಭಿನ್ನ. ಹೂವು, ಮರಗಳ ರಸ ಹೀರುತ್ತಾ, ಸಣ್ಣ ಪುಟ್ಟ ಕೀಟಗಳನ್ನು ತಿನ್ನುತ್ತಾ ಬದುಕುತ್ತವೆ. ಅಪರೂಪಕ್ಕೆ ಹಿಸ್ಕ, ಬಸವನ ಹುಳು ಸಿಕ್ಕರಂತೂ ಇವುಗಳಿಗೆ ಬಾಡೂಟದ ಸಂಭ್ರಮ.

ಇವುಗಳ ದೇಹದಲ್ಲಿ ವಿಶಿಷ್ಟವಾದ ಫಾರ್ಮಿಕ್ ಎಸಿಡ್ ಇದೆ. ಇವುಗಳ ಹೂಡಿನ ಬಳಿ ಹುಳಿ ಹುಳಿ ವಾಸನೆಗೆ ಇದೇ ಕಾರಣ. ಈ ಹುಳಿಯ ಕಾರಣದಿಂದಾಗಿಯೇ ಸೌಳಿ ಹಿಂಡು ಅಂದರೆ, ಕೆಲವು ಬುಡಕಟ್ಟು ಜನಾಂಗದವರಿಗೆ ಬಾಯಲ್ಲಿ ನೀರೂರುತ್ತದೆ. ಮುಖ್ಯವಾಗಿ ಮುಂಡಗೋಡು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನರು ಈ ಇರುವೆಗಳಿಂದ ಚಟ್ನಿ ಮಾಡಿ ತಿನ್ನುತ್ತಾರೆ. ಇದು ಔಷಧಿಯೂ ಹೌದು ಎಂಬುದು ಪುರಾತನ ನಂಬಿಕೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಮಳಗಾಂನ ಗೌರಿ ಸಿದ್ದಿ ಹೇಳುವ ಪ್ರಕಾರ, ಸೌಳಿಗಳ ಚಟ್ನಿ ಬಾಣಂತಿಯರಿಗೆ ಉಪಯುಕ್ತವಾದ ಔಷಧಿ. ಜ್ವರ ಬಂದಾಗ ಅನ್ನದೊಂದಿಗೆ ಈ ಚಟ್ನಿ ತಿನ್ನುವುದರಿಂದ ಆಸ್ಪತ್ರೆಗೆ ಹೋಗೋ ಪ್ರಸಂಗವೇ ಬಾರದು. ಊರಿಗೂರಿಗೇ ಚಿಕೂನ್ ಗುನ್ಯಾ ಬಂದು ಶಾಪಗ್ರಸ್ಥರಂತೆ ಎಲ್ಲರೂ ಕುಂಟುತ್ತ, ನೋವನ್ನು ನುಂಗಿ ನಡೆಯುತ್ತಿದ್ದರೆ ಚೌಳಿಗಳ ಕಷಾಯ ಮಾಡಿ ಕುಡಿದರೆ ಮೈ ನೋವು ಕಡಿಮೆಯಾಗುತ್ತದೆ ಎನ್ನುತ್ತಾರೆ.